ತನ್ನ ಎಡಗೈನಲ್ಲಿ ಇಂಪ್ಲಾಂಟ್ ಮಾಡಿಸಿಕೊಂಡಿದ್ದ ಓಪಲ್ ಪೇ ಕಾರ್ಡ್ ಬಳಸಿ ಸ್ವೈಪ್ ಮಾಡಿ ಹಣ ಸಂದಾಯಿಸಲು ಮುಂದಾಗಿದ್ದ. ಲುಡೋನ ಮೇಲೆ ರೈಲ್ವೆ ಅಧಿಕಾರಿಗಳು ಟಿಕೆಟ್ ರಹಿತ ಪ್ರಯಾಣ ಮಾಡುತ್ತಿದ್ದ ಆರೋಪದ ಮೇಲೆ ಕೇಸ್ ಬುಕ್ ಮಾಡಿದ್ದರು. ಕೇಸ್ ನ್ಯಾಯಾಲಯಕ್ಕೂ ಹೋಗಿ, ಲುಡೋಗೆ 220 ಡಾಲರ್‌ಗಳ ದಂಡವನ್ನೂ ಹಾಕಲಾಯಿತು.

ವಾಸ್ತವದಲ್ಲಿ ನಡೆದದ್ದಿಷ್ಟು. ಉದ್ಯೋಗದ ಮೇಲೆ ನಿತ್ಯ ಪ್ರಯಾಣಿಸುತ್ತಿದ್ದ ಲುಡೋಗೆ ದಿನವೂ ಟಿಕೆಟ್ ತೆಗೆದುಕೊಳ್ಳುವ ಪ್ರಕ್ರಿಯೆಯಿಂದ ಸಮಯ ಹಾಳಾಗುತ್ತಿದೆ ಅನ್ನಿಸಿತು. ಪದೇ ಪದೇ ವ್ಯಾಲೆಟ್‌ನಿಂದ ಕ್ರೆಡಿಟ್ ಕಾರ್ಡ್, ಕರೆನ್ಸಿ ನೋಟ್, ಟ್ರಾವೆಲ್ ಕಾರ್ಡ್ ತೆಗೆಯುವುದೂ ಆತನಿಗೆ ಇಷ್ಟವಿರಲಿಲ್ಲ. ತಂತ್ರಜ್ಞಾನ ಲಭ್ಯವಿರುವಾಗ ಅದನ್ನೇಕೆ ಬಳಸಬಾರದು ಎಂದು ಸ್ಮಾರ್ಟ್ ಆಗಿ ಯೋಚಿಸಿ, ಓಪಲ್ ಕಾರ್ಡ್‌ನ ಚಿಪ್ ಅನ್ನು ತನ್ನ ಎಡಗೈನ ಮಣಿಕಟ್ಟಿನ ಚರ್ಮದೊಳಗೆ ಇಂಪ್ಲಾಂಟ್ ಮಾಡಿಸಿಕೊಂಡ. ಎಲ್ಲೆಲ್ಲಿ ಹಣ ನೀಡಬೇಕಿದ್ದರೂ ಅದನ್ನೇ ಸ್ವೈಪಿಂಗ್ ಕಾರ್ಡ್‌ನಂತೆ ಬಳಸತೊಡಗಿದ. ರೈಲು ಟಿಕೆಟ್‌ನ ಹಣನೀಡಲು ಹಾಗೆಯೇ ಮಾಡಿದಾಗ ಅದನ್ನೊಪ್ಪದ ಅಧಿಕಾರಿಗಳು 'ಬೇರೆಯವರೆಲ್ಲ ಯಾವ ರೀತಿ ಟಿಕೆಟ್‌ಗೆ ಹಣ ನೀಡಿದ್ದಾರೋ ನೀನೂ ಹಾಗೆಯೇ ನೀಡು, ಇಲ್ಲವಾದರೆ ರೈಲಿನಿಂದ ಇಳಿ' ಎಂದು ಆದೇಶಿಸಿ ಲುಡೋನ ಕೆಲಸವನ್ನು ಕಾರ್ಡ್ ಕಂಪನಿಗೂ ತಿಳಿಸಿದರು. ನಿಮಗೆ ದುಡ್ಡು ಬಂದರಾಯಿತು ತಾನೆ? ಅದನ್ನು ನಾನು ಹೇಗೆ ನೀಡಿದರೇನು? ಎಂದು ವಾದಿಸಿದ. 'ಇದು ನಮ್ಮ ಕಾರ್ಡ್‌ನ ಉಪಯೋಗ ವಿಧಾನದ ಉಲ್ಲಂಘನೆ' ಎಂದ ಓಪಲ್ ಕಂಪನಿ ಲುಡೋನ ಕಾರ್ಡನ್ನು ಬ್ಲಾಕ್ ಮಾಡಿತು. ಇದರಿಂದ ಅಸಮಧಾನಗೊಂಡ ಲುಡೋ, 'ನಾನೊಬ್ಬ ಸೈಬೋರ್ಗ್, ನನಗೂ ಇತರರಿಗಿರುವಷ್ಟೇ ಹಕ್ಕಿದೆ, ಅದು ಹೇಗೆ ನೀವು ನನ್ನ ಹಕ್ಕನ್ನು ಕಸಿದುಕೊಳ್ಳುತ್ತೀರಿ?' ಎಂದು ಪ್ರಶ್ನಿಸಿದ. 'ಸೈಬೋರ್ಗ್‌ಗಳ ಹಕ್ಕಿನ ಸಂರಕ್ಷಣೆಯಾಗಬೇಕು' ಎಂದು ಸೈಬೋರ್ಗ್ ಫೌಂಡೇಶನ್‌ಗೆ ತನ್ನ ಅಹವಾಲು ಸಲ್ಲಿಸಿದ. ಈ ಪ್ರಕರಣದ ಮೂಲಕ ತಂತ್ರಜ್ಞಾನದ ನೆರವಿನಿಂದ ದೈಹಿಕ ನ್ಯೂನ್ಯತೆ



ಕ್ಲಾಡಿಯಾ ಮಿಚೆಲ್: ಕೃತಕ ಕೈಗಳನ್ನು ಹೊಂದಿರುವ ಮೊದಲ ಮಹಿಳೆ



ತನ್ನ ಎಡಗೈಗೆ ಹಲವು ಉಪಕರಣಗಳನ್ನು ಅಳವಡಿಸಿಕೊಂಡಿರುವ ಕೆವಿನ್ ವಾರ್‌ವಿಕ್ 'ಸೈಬರ್‌ನೆಟಿಕ್ಸ್' ಹೆಸರಾಂತ ತಜ್ಞನೂ ಹೌದು.

## ತಲ್ಲಣ ಸೃಷ್ಟಿಸಿರುವ ಸೈಬೋರ್ಗ್ ತಂತ್ರಜ್ಞಾನ

ಇಲ್ಲಿ ಬಳಸಲಾಗುತ್ತಿರುವ ತಂತ್ರಜ್ಞಾನ ಮತ್ತು ಕೃತಕ ಅಂಗಗಳು ಮನುಷ್ಯನ ನೈಜ ಚಲನೆ ಮತ್ತು ಸ್ವರೂಪವನ್ನು ಮೀರಿಸುವಷ್ಟು ನಿಖರತೆ ಹೊಂದಿರುವುದು ಅನೇಕ ನೈತಿಕ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಹೃದಯದ ಆರೋಗ್ಯಕ್ಕೆಂದು ಪೇಸ್‌ಮೇಕರ್ ಅನ್ನು ಇಂಪ್ಲಾಂಟ್ ಮಾಡಿಕೊಳ್ಳುವುದನ್ನು ನೋಡಿದ್ದ ಜನ ಬೇಕಾದ ಜಾಗದಲ್ಲಿ ಕಿವಿ, ಕಣ್ಣು, ಶಬ್ದ, ಬಣ್ಣ ಗ್ರಹಣದ ಆಂಟೆನಾಗಳನ್ನು ತೂರಿಸಿಕೊಳ್ಳುವುದನ್ನು ಅಷ್ಟಾಗಿ ಅರಗಿಸಿಕೊಂಡಿಲ್ಲ. ಸಾಮಾನ್ಯ ಅಂಗಾಂಗಗಳಿಗಿಂತ ಹೆಚ್ಚಿನ ಮತ್ತು ವಿಶೇಷ ಶಕ್ತಿ–ಸಾಮರ್ಥ್ಯ ನೀಡುವ ಇಂಪ್ಲಾಂಟ್‌ಗಳು ನಮ್ಮ ನಮ್ಮಲ್ಲೇ ಭೇದವನ್ನುಂಟುಮಾಡಿ ಅಸಹಜ ಸಾಮಾಜಿಕ ಸಂರಚನೆಗೆ ಕಾರಣವಾಗುತ್ತವೆ ಎನ್ನುವವರ ದೊಡ್ಡ ಪಡೆಯೇ ಇದೆ. ನೀಲ್ ಹಾರ್ಬಿಸನ್, 'ತನ್ನ ತಲೆಗೆ ಆಂಟೆನಾ ಜೋಡಿಸಿಕೊಡಿ' ಎಂದು ಸಾವಿರಾರು ವೈದ್ಯರ ಬಳಿ ಎಡತಾಕಿದ್ದ. ಅವರೆಲ್ಲ ನೈತಿಕ ಜವಾಬ್ದಾರಿಯ ಕಾರಣ ನೀಡಿ ತಿರಸ್ಕರಿಸಿದಾಗ, ತನ್ನ ಸ್ನೇಹಿತನ ನೆರವಿನಿಂದ ಅದನ್ನು ಹೇಗೆ ಇಂಪ್ಲಾಂಟ್ ಮಾಡಿಕೊಂಡೆ ಎನ್ನುವುದನ್ನು ತನ್ನ ಟೆಡ್‌ಟಾಕ್‌ನಲ್ಲಿ ಸುದೀರ್ಘವಾಗಿ ವಿವರಿಸಿದ್ದಾನೆ. ಥ್ರಿಲ್ಲರ್ ಸಿನಿಮಾಗಳ ಪಾತ್ರದಂತೆ ನಮ್ಮ ನಡುವೆಯೇ ಇದ್ದುಕೊಂಡು, ನಮ್ಮೆಲ್ಲ ಮಾಹಿತಿ, ಚಲನವಲನದ ಮೇಲೆ ಆಧಿಪತ್ಯ ಸಾಧಿಸಿ ನಮಗೆ ಹಾನಿ ಮಾಡಲು ಪ್ರಾರಂಭಿಸಿದರೆ ನಾವು ಯಾರ ಬಳಿ ದೂರುವುದು? ಅಷ್ಟಕ್ಕೂ ಅದು ನಮಗೆ ತಿಳಿಯುವ ಬಗೆಯಾದರೂ ಯಾವುದು? ಹೀಗೆ ಸೈಬೋರ್ಗ್ ತಂತ್ರಜ್ಞಾನದ ಬಗ್ಗೆ ಅನೇಕ ಪ್ರಶ್ನೆಗಳಿವೆ.

2014ರಲ್ಲಿ ಇಲಿನಾಯ್ಸ್ ವಿಶ್ವವಿದ್ಯಾಲಯದ ತಜ್ಞರ ತಂಡ 3D ತಂತ್ರಜ್ಞಾನ ಬಳಸಿ ಹೃದಯ ಪೇಸ್‌ಮೇಕರ್‌ನ ಕೆಲಸ ಮಾಡುವ ವಿದ್ಯುನ್ಮಾನ ತೆಳು ಪದರವೊಂದನ್ನು ತಯಾರಿಸಿ ಬಳಸಲು ಶುರುಮಾಡಿ ಯಶಸ್ವಿಯೂ ಆಗಿದೆ. ಹೃದಯದ ಬಡಿತವನ್ನು ನಿರಂತರವಾಗಿರಿಸುವ ಉಪಕರಣವನ್ನೂ ತಯಾರಿಸಿದೆ. ಊನವಾದ ಅಂಗಗಳನ್ನೆಲ್ಲ ರಿಪ್ಲೇಸ್ ಮಾಡುತ್ತಾ ಹೋದರೆ, ವಯಸ್ಸಾಗುವುದನ್ನು ತಡೆದರೆ, ಆಯುಷ್ಯವನ್ನು ಹೆಚ್ಚಿಸಿಕೊಂಡರೆ ಜನಸಂಖ್ಯಾ ಅಸಮತೋಲನ ಉದ್ಭವಿಸುತ್ತದೆ ಎಂಬ ವಾದ ಒಂದೆಡೆ ಇದೆ. ಆರೋಗ್ಯದ ಸಮಸ್ಯೆಯನ್ನು ದೂರಮಾಡಿಕೊಳ್ಳಲು ನೈಜ ಅಂಗಾಂಗಗಳನ್ನೇ ಎರವಲು ಪಡೆಯಲಾಗುತ್ತಿರುವ ಇಂದಿನ ದಿನಗಳಲ್ಲಿ ಕೃತಕ ಅದರಲ್ಲೂ ಎಲೆಕ್ಟ್ರಾನಿಕ್ ಸಾಧನಗಳಿಂದ ನೆರವು ಪಡೆದರೆ ಅದು ಹೇಗೆ ತಪ್ಪಾಗುತ್ತದೆ? ಎಂದು ವಾದಿಸುವವರ ಸಂಖ್ಯೆಯೇನೂ ಕಡಿಮೆ ಇಲ್ಲ.